# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-3.

ಸಂಖ್ಯೆ:ಎಕ್ಸ್1:ಡ್ರಾ.ಗ್ರೇ.ಪ/ನವೆಂಬರ್-2018/05 /2018-19 ದಿನಾಂಕ: 22.05.2018

## -: ಅಧಿಸೂಚನೆ :-

**ವಿಷಯ:** 2018ನೇ ಸಾಲಿನ ನವೆಂಬರ್ ತಿಂಗಳಲ್ಲಿ ನಡೆಯಲಿರುವ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗೆ ರಾಜ್ಯದ ವಿವಿಧ ಶಾಲಾ ಕಾಲೇಜುಗಳಿಂದ ಪರೀಕ್ಷಾ ಅರ್ಜಿಗಳನ್ನು ಸ್ವೀಕರಿಸುವ ಬಗ್ಗೆ.

***

ಪ್ರತಿ ವರ್ಷದಂತೆ ಈ ವರ್ಷವೂ ಡ್ರಾಯಿಂಗ್ ಗ್ರೇಡ್ ಪರೀಕ್ಷೆಯನ್ನು 2018ನೇ ನವೆಂಬರ್ ತಿಂಗಳಲ್ಲಿ ನಡೆಸಲು ನಿರ್ಧರಿಸಲಾಗಿದೆ. ಈ ಪರೀಕ್ಷೆಗೆ ಖಾಸಗಿ, ಸರ್ಕಾರಿ ಪ್ರೌಢಶಾಲೆ, ಸರ್ಕಾರಿ ಕಿರಿಯ ಕಾಲೇಜು ಹಾಗೂ ಕಲಾ ತರಬೇತಿ ಕೇಂದ್ರಗಳಿಂದ ಪರೀಕ್ಷೆಗೆ ಕುಳಿತುಕೊಳ್ಳಲು ಅಭ್ಯರ್ಥಿಗಳಿಂದ ಪರೀಕ್ಷಾ ಶುಲ್ಕ ಹಾಗೂ ನಾಮಿನಲ್ ರೋಲ್ ಸಲ್ಲಿಸಲು ಕೆಳಕಂಡಂತೆ ಸುತ್ತೋಲೆ ಹೊರಡಿಸಲಾಗಿದೆ.

**ಪರೀಕ್ಷೆ ತೆಗೆದುಕೊಳ್ಳಲು ಅಗತ್ಯವಿರುವ ಅರ್ಹತೆ:-**

ಅಭ್ಯರ್ಥಿಯು ಖಾಸಗಿಯಾಗಿ ಅಥವಾ ಶಾಲೆಯ ಅಭ್ಯರ್ಥಿಯಾಗಿ ಪರೀಕ್ಷೆ ತೆಗೆದುಕೊಳ್ಳಬಹುದು. ಅಭ್ಯರ್ಥಿಗಳು ಲೋಯರ್ ಗ್ರೇಡ್ ಪರೀಕ್ಷೆ ತೆಗೆದುಕೊಳ್ಳದೆ ನೇರವಾಗಿ ಹೈಯರ್ ಗ್ರೇಡ್ ಪರೀಕ್ಷೆ ತೆಗೆದುಕೊಳ್ಳಬಹುದು. ಆದರೆ ಎರಡೂ ಪರೀಕ್ಷೆಗಳನ್ನು ಒಂದೇ ಬಾರಿ ತೆಗೆದುಕೊಳ್ಳಲು ಅವಕಾಶವಿಲ್ಲ. ಪರೀಕ್ಷೆಯನ್ನು ಮಂಡಳಿಯ ಕಛೇರಿಯಿಂದ ಅನುಮೋದಿಸಲ್ಪಟ್ಟ ಪರೀಕ್ಷಾ ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುವುದು.

ಪ್ರತಿ ಕೇಂದ್ರದಲ್ಲೂ 100 ಅಭ್ಯರ್ಥಿಗಳಿಗೆ ಕಡಿಮೆ ಇಲ್ಲದಂತೆ ಅಭ್ಯರ್ಥಿಗಳು ಇರಬೇಕು. ಒಂದು ವೇಳೆ 100 ಅಭ್ಯರ್ಥಿಗಳಿಗಿಂತ ಕಡಿಮೆ ಇದ್ದಲ್ಲಿ ಕಳೆದ ಬಾರಿ ಕಳುಹಿಸಿರುವ ಪರೀಕ್ಷಾ ಕೇಂದ್ರಗಳ ಪಟ್ಟಿಯನ್ನು ಪರಿಶೀಲಿಸಿ ತಮ್ಮ ಶಾಲೆಗೆ ಹತ್ತಿರವಿರುವ ಪರೀಕ್ಷಾ ಕೇಂದ್ರದ ಮೂಲಕ ತಮ್ಮ **NOMINAL ROLL**ನ್ನು ಕಳುಹಿಸಲು ತಿಳಿಸಿದೆ. ನೇರವಾಗಿ ಈ ಕಛೇರಿಗೆ 100ಕ್ಕಿಂತ ಕಡಿಮೆ ಇರುವ ಅಭ್ಯರ್ಥಿಗಳ **NOMINAL ROLL**ನ್ನು ಕಳುಹಿಸಿದರೆ ಪರೀಕ್ಷಾ ಮಂಡಳಿಯಿಂದಲೇ ಸಂಬಂಧಿಸಿದ ಶಾಲೆಗೆ ಹತ್ತಿರವಿರುವ ಪರೀಕ್ಷಾ ಕೇಂದ್ರಕ್ಕೆ ಆ ಶಾಲೆಯನ್ನು ಲಗತ್ತಿಸಲಾಗುವುದು.

ಪರೀಕ್ಷೆ ತೆಗೆದುಕೊಳ್ಳಲಿಚ್ಛಿಸುವ ಅಭ್ಯರ್ಥಿಗಳು ಪಾವತಿಸಬೇಕಾದ ಶುಲ್ಕದ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ. | ಪರೀಕ್ಷೆಯ ಹೆಸರು | ಪರೀಕ್ಷಾ ಶುಲ್ಕ ರೂ. | ಅರ್ಜಿ ಶುಲ್ಕ ರೂ. | ಒಟ್ಟು ಶುಲ್ಕ ರೂ. |
|---|---|---|---|---|
| 1. | ಡ್ರಾಯಿಂಗ್ ಗ್ರೇಡ್ ಲೋಯರ್ | 240-00 | 20.00 | 260-00 |
| 2. | ಡ್ರಾಯಿಂಗ್ ಗ್ರೇಡ್‌ಹೈಯರ್ | 305-00 | 20.00 | 325-00 |

ಪ್ರತಿಯೊಬ್ಬ ಅಭ್ಯರ್ಥಿಯು ಪರೀಕ್ಷಾ ಶುಲ್ಕದೊಂದಿಗೆ ಶಾಲೆಯ ಪರೀಕ್ಷಾ ಕಾರ್ಯಕ್ಕಾಗಿ **ರೂ.10.00ಗಳನ್ನು** ಶಾಲೆಗೆ ಪ್ರತ್ಯೇಕವಾಗಿ ಪಾವತಿ ಮಾಡಬೇಕಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ಇದೆ. ಆದರೆ ಈ ಪಂಗಡದ ವಿದ್ಯಾರ್ಥಿಗಳು ಅರ್ಜಿ ಶುಲ್ಕ ರೂ.20.00 ಮಂಡಳಿಗೆ ಪಾವತಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಸಂಬಂಧ ಪಟ್ಟ ತಹಶೀಲ್ದಾರರು ನೀಡಿರುವ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಶಾಲಾ ಮುಖ್ಯಸ್ಥರು ಪಡೆದು ಧೃಢೀಕರಿಸಿ ತಮ್ಮ ಸಂಸ್ಥೆಯಲ್ಲಿಯೇ ಕಾಯ್ದಿರಿಸಲು ತಿಳಿಸಿದೆ. ಜಾತಿ ಹಾಗು ಇತರೆ ಪ್ರಮಾಣ ಪತ್ರಗಳನ್ನು ತಮ್ಮ ಸಂಸ್ಥೆಯ ತಪಾಸಣೆಯ ವೇಳೆಯಲ್ಲಿ ಹಾಜರುಪಡಿಸಲು ತಿಳಿಸಿದೆ. **ಯಾವುದೇ ಕಾರಣಕ್ಕೂ ಜಾತಿ ಪ್ರಮಾಣ ಪತ್ರಗಳನ್ನು ಮಂಡಳಿಗೆ ಕಳುಹಿಸದಿರಲು ಸೂಚಿಸಿದೆ.**

ಅಭ್ಯರ್ಥಿಗಳಿಂದ ವಸೂಲಿ ಮಾಡಿದ ಪರೀಕ್ಷಾ ಶುಲ್ಕವನ್ನು ಈ ಕೆಳಗೆ ತಿಳಿಸಿರುವ ಕೊನೆ ದಿನಾಂಕದ **ಒಳಗೆ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನ ಮುಖಾಂತರ ಇತರೆ ಪರೀಕ್ಷೆಗಳ NEFT ಚಲನ್ ಮೂಲಕ ಹಣ ಸಂದಾಯ ಮಾಡಿ ಅದರ ಮೂಲ ಪ್ರತಿಯನ್ನು ಎನ್.ಆರ್‌ನೊಂದಿಗೆ ಕಳುಹಿಸುವುದು. ಹಣ ಸಂದಾಯ ಮಾಡಿದ ಚಲನ್‌ನ ಒಂದು ಜೆರಾಕ್ಸ್ ಪ್ರತಿಯನ್ನು ತಮ್ಮಲ್ಲಿ ಉಳಿಸಿಕೊಳ್ಳುವುದು. ಇನ್ನು ಮುಂದೆ ಪರೀಕ್ಷಾ ಶುಲ್ಕ ತಿದ್ದುಪಡಿ ಶುಲ್ಕ, ದಂಡ ಶುಲ್ಕ ಇತ್ಯಾದಿ ಎಲ್ಲಾ ಶುಲ್ಕಗಳನ್ನು ಸದರಿ NEFT ಚಲನ್ ಮೂಲಕವೇ ಕಡ್ಡಾಯವಾಗಿ ಪಾವತಿಸಬೇಕಾಗಿರುವುದರಿಂದ ಖಾಲಿ NEFT ಚಲನ್‌ನ ಜೆರಾಕ್ಸ್ ಪ್ರತಿಗಳನ್ನು ಮಾಡಿಸಿಕೊಳ್ಳುವುದು.**

ನಿಗದಿಪಡಿಸಿರುವ **NOMINAL ROLL** ನ್ನು ಭರ್ತಿ ಮಾಡಿ ಅಂಗೀಕೃತ ಪರೀಕ್ಷಾ ಕೇಂದ್ರದ ಮುಖಾಂತರ ಮಂಡಳಿಗೆ ರವಾನಿಸತಕ್ಕದ್ದು. ಈ ಹಿಂದಿನಂತೆ ಎಲ್ಲಾ ಪರೀಕ್ಷಾ ಅರ್ಜಿಗಳನ್ನು ಒಂದೇ ತಂಡದಲ್ಲಿ ನಿಗದಿತ ದಿನಾಂಕದೊಳಗೆ ಮಂಡಳಿಗೆ ಕಳುಹಿಸತಕ್ಕದ್ದು. **ದಂಡ ಶುಲ್ಕ ಪಾವತಿ ಮಾಡಿ, ಎರಡನೇ ತಂಡದಲ್ಲಿ ಕಳುಹಿಸುವ ವ್ಯವಸ್ಥೆಯನ್ನು ರದ್ದುಪಡಿಸಿದೆ. ಸಂಸ್ಥೆಯ ಮುಖ್ಯಸ್ಥರು ಇದನ್ನು ಎಚ್ಚರಿಕೆಯಿಂದ ಪಾಲಿಸತಕ್ಕದ್ದು. ನಿಗದಿತ ದಿನಾಂಕದ ನಂತರ ಬಂದ ಪರೀಕ್ಷಾ NOMINAL ROLL ನ್ನು ಕಡ್ಡಾಯವಾಗಿ ತಿರಸ್ಕರಿಸಲಾಗುವುದು.** ಈ ಕೆಳಗೆ ಸೂಚಿಸಿರುವಂತೆ ಪರೀಕ್ಷಾ ಶುಲ್ಕವನ್ನು ಕಟ್ಟಲು ಕೊನೆಯ ದಿನಾಂಕಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

1. ಪರೀಕ್ಷಾ ಶುಲ್ಕವನ್ನು ಕಟ್ಟಲು ಕೊನೆಯ ದಿನಾಂಕ : 20.07.2018
2. NEFT ಚಲನ್‌ನಲ್ಲಿ ಶುಲ್ಕ ತುಂಬಲು ಕೊನೆಯ ದಿನಾಂಕ : 24.07.2018
3. NOMINAL ROLL ಹಾಗೂ ನೆಫ್ಟ್ ಚಲನ್ ಮಂಡಳಿಗೆ ತಲುಪಬೇಕಾದ ದಿನಾಂಕ : 26.07.2018

ಪರೀಕ್ಷಾ ಶುಲ್ಕವನ್ನು ಒಮ್ಮೆ ಪಾವತಿ ಮಾಡಿದ ಮೇಲೆ ಯಾವುದೇ ಕಾರಣಕ್ಕೂ ಇದನ್ನು ಹಿಂದಿರುಗಿಸಲಾಗುವುದಿಲ್ಲ. ಅಥವಾ ಮುಂದಿನ ಪರೀಕ್ಷೆಗೆ ವಿನಾಯಿತಿ ಕೊಡಲಾಗುವುದಿಲ್ಲ.

4. ಈ ಅಧಿಸೂಚನೆಯೊಂದಿಗೆ ಮುಖ್ಯ ಅಧೀಕ್ಷಕರ ಒಪ್ಪಿಗೆ ಪತ್ರ ಲಗತ್ತಿಸಿ ಕಳುಹಿಸಲಾಗಿದೆ. ಅದನ್ನು ತುಂಬಿ **NOMINAL ROLL**ನ ಜೊತೆಯಲ್ಲಿಯೇ ಕಳುಹಿಸಬೇಕು. ಹಾಗೂ ಮುಖ್ಯ ಅಧೀಕ್ಷಕರ ವೇತನ ಜಮ ಆಗುತ್ತಿರುವ ಖಾತೆಯ ವಿವರಗಳನ್ನು ಭರ್ತಿ ಮಾಡುವ ನಮೂನೆ ಕಳುಹಿಸಲಾಗಿದೆ. ಈ ನಮೂನೆ ಭರ್ತಿ ಮಾಡಿ, ಬ್ಯಾಂಕ್ ಪಾಸ್ ಬುಕ್‌ನಲ್ಲಿ ಬ್ಯಾಂಕ್ ವಿವರಗಳು,

ಬ್ಯಾಂಕ್ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ಕೋಡ್ ಇರುವ ಪುಟದ ಜೆರಾಕ್ಸ್ ಪ್ರತಿಯನ್ನು ದೃಢೀಕರಿಸಿ ತಪ್ಪದೇ ಲಗತ್ತಿಸುವುದು. ಕಳುಹಿಸದಿದ್ದಲ್ಲಿ ಪರೀಕ್ಷೆಯ ಸಾದಿಲ್ವಾರು ಹಣವನ್ನು ಮಂಜೂರು ಮಾಡಲಾಗುವುದಿಲ್ಲ.

NOMINAL ROLLಗಳು ಬೇರೆ ವಿಭಾಗಗಳಿಗೆ ಹೋಗುವುದನ್ನು ತಡೆಯಲು NOMINAL ROLLಗಳ ಕವರ್‌ಗಳ ಮೇಲೆ **"ಡ್ರಾಯಿಂಗ್ ಗ್ರೇಡ್ ಪರೀಕ್ಷೆ ಅರ್ಜಿಗಳು" ಎಂದು ದಪ್ಪ ಅಕ್ಷರಗಳಲ್ಲಿ ಬರೆದು ಶ್ರೀ ಸಿ.ವಿ.ಕುಮಾರಸ್ವಾಮಿ, ಸಹಾಯಕ ನಿರ್ದೇಶಕರು, (ಇತರೆ ಪರೀಕ್ಷೆಗಳು) ವಿಭಾಗ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 4ನೇ ಮಹಡಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ಇವರ ವೈಯಕ್ತಿಕ ವಿಳಾಸಕ್ಕೆ ಕಳುಹಿಸಲು ತಿಳಿಸಿದೆ.**

ಕಿವುಡ, ಮೂಕ ಅಭ್ಯರ್ಥಿಗಳು (ಲೋಯರ್ ಮತ್ತು ಹೈಯರ್) ರೇಖಾ ನಕ್ಷೆಗೆ ಜಿಯಾಮಿಟ್ರಿಕಲ್ ಡ್ರಾಯಿಂಗ್ (Geometrical Drawing) ಬದಲಾಗಿ ಈ ಕೆಳಗೆ ತಿಳಿಸಿದಂತೆ ಪರೀಕ್ಷೆ ತೆಗೆದುಕೊಳ್ಳಬೇಕಾಗುತ್ತದೆ (ಈ ವಿದ್ಯಾರ್ಥಿಗಳ ವಿವರವನ್ನು ಪ್ರತ್ಯೇಕ NOMINAL ROLLನಲ್ಲಿ ಭರ್ತಿ ಮಾಡಿ ಮಂಡಳಿಗೆ ಕಳುಹಿಸುವುದು)

**ಲೋಯರ್ ಗ್ರೇಡ್:-** ಒಂದು ಸಮತಳ ಪಾತ್ರೆ (Dish)ಯಲ್ಲಿ ಇರಿಸಿರುವ ಹಣ್ಣು ಅಥವಾ ತರಕಾರಿಗಳ ಚಿತ್ರವನ್ನು ಸೀಸದ ಕಡ್ಡಿಯಿಂದ ಬಿಡಿಸುವುದು. (Geometrical Drawing).

**ಹೈಯರ್ ಗ್ರೇಡ್:-** ಮೂರು ಸರಳ ವಸ್ತುಗಳನ್ನು ಸೀಸದ ಕಡ್ಡಿಯಿಂದ ಬಿಡಿಸುವುದು (Geometrical Drawing, Lettering and Scale Drawing).

**ಸೂಚನೆಗಳು:** NOMINAL ROLLನ್ನು ತಯಾರಿಸುವಾಗ ಸಂಸ್ಥೆಯ ಮುಖ್ಯಸ್ಥರು ಅತೀ ಮುಖ್ಯವಾಗಿ ಗಮನಿಸಬೇಕಾದ ಅಂಶ ಎಂದರೆ ಪರೀಕ್ಷಾ ಮಂಡಳಿಯಿಂದ ಸರಬರಾಜು ಮಾಡಿದ NOMINAL ROLL ನ್ನು ಗ್ರೇಡ್ ವಾರು (**LOWER GRADE AND HIGHER GRADE** ಬೇರೆ ಬೇರೆಯಾಗಿ) ತಯಾರಿಸಿ ಲೋಯರ್ ಗ್ರೇಡಿಗೆ ಬೇರೆ ಕ್ರಮ ಸಂಖ್ಯೆ ಹಾಗೂ ಹೈಯರ್ ಗ್ರೇಡ್‌ಗೆ ಬೇರೆ ಕ್ರಮ ಸಂಖ್ಯೆಯನ್ನು ನೀಡಿ NOMINAL ROLLನ್ನು ತಯಾರಿಸಿ ಕಳುಹಿಸಬೇಕು. ಹಾಗೂ ಪರೀಕ್ಷಾ ಕೇಂದ್ರಕ್ಕೆ ಟ್ಯಾಗ್ ಆದ ಶಾಲೆಯ ವಿದ್ಯಾರ್ಥಿಗಳ ಎನ್.ಆರ್.ನ್ನು ಸಹ ಸೇರಿಸಿ ಕ್ರಮ ಸಂಖ್ಯೆ ನೀಡಬೇಕು.

1. ಎಲ್ಲಾ ಸಂಸ್ಥೆಯ ಮುಖ್ಯಸ್ಥರು ನಾಮಿನಲ್ ರೋಲ್ ಗಳನ್ನು ತಯಾರಿಸುವಾಗ ಅಭ್ಯರ್ಥಿಯ ವಿವರಗಳಾದ ಹೆಸರು, ತಂದೆಯ ಹೆಸರು, ತಾಯಿಯ ಹೆಸರು, ಹುಟ್ಟಿದ ದಿನಾಂಕ, ಇತ್ಯಾದಿಗಳನ್ನು ಶಾಲಾ ದಾಖಲಾತಿ ವಹಿಯಲ್ಲಿರುವಂತೆ (ಸ್ಪೆಲಿಂಗ್, ಇನಿಷಿಯಲ್, ಸರ್‌ನೇಮ್ ಸೇರಿದಂತೆ) ಪರಿಶೀಲಿಸಿ ತಪ್ಪಿಲ್ಲದೇ ಆಂಗ್ಲ ವರ್ಣಮಾಲೆಯ ಅನುಕ್ರಮವಾಗಿ ಕಳುಹಿಸುವುದು. ತಪ್ಪು ಮಾಹಿತಿ ಸಲ್ಲಿಸಿ ನಂತರ ಫಲಿತಾಂಶದಲ್ಲಿ ಅಂಕಪಟ್ಟಿಯಲ್ಲಿ ತಪ್ಪಾಗಿ ಮುದ್ರಣಗೊಂಡರೆ ಅಂತಹ ಸಂಸ್ಥೆಯ ಮುಖ್ಯಸ್ಥರಿಗೆ ಮಂಡಳಿಯ ನಿಯಮದಂತೆ ದಂಡ ವಿಧಿಸಲಾಗುವುದು. ಹಾಗೂ ಇಂತಹ ತಿದ್ದುಪಡಿಗಳನ್ನು ಮಾನ್ಯ ಮಾಡಲಾಗುವುದಿಲ್ಲ. ಆದ್ದರಿಂದ ಯಾವುದೇ ವ್ಯತ್ಯಾಸವಾಗದಂತೆ ಎಚ್ಚರಿಕೆ ವಹಿಸುವುದು.

ಮೇಲಿನ ಅಧಿಸೂಚನೆಯಲ್ಲಿ ನೀಡಿರುವ ಸೂಚನೆಯ ಜೊತೆಗೆ ಪರೀಕ್ಷಾ ಮಂಡಳಿಯಿಂದ ಕಾಲಕಾಲಕ್ಕೆ ನೀಡುವ ಎಲ್ಲಾ ಸೂಚನೆಗಳನ್ನು ತಪ್ಪದೇ ಪಾಲಿಸಿ ಡ್ರಾಯಿಂಗ್ ಗ್ರೇಡ್ ಪರೀಕ್ಷೆಯನ್ನು ಸುಗಮವಾಗಿ ನಡೆಸಲು ಎಲ್ಲಾ ಸಂಸ್ಥೆಯ ಮುಖ್ಯಸ್ಥರು ಸಹಕರಿಸುವಂತೆ ಈ ಮೂಲಕ ತಿಳಿಸಲಾಗಿದೆ.

ವಿಶೇಷ ಸೂಚನೆಗಳು

1. ತಮ್ಮ ಕೇಂದ್ರಕ್ಕೆ ಟ್ಯಾಗ್ ಆದ ಶಾಲೆಗಳಿಗೆ ಮಂಡಳಿಯಿಂದ ನೀಡುವ ಎಲ್ಲಾ ಜ್ಞಾಪನ/ಸುತ್ತೋಲೆಗಳನ್ನು ಕಡ್ಡಾಯವಾಗಿ ನೀಡಲು ತಿಳಿಸಿದೆ.
2. ಪರೀಕ್ಷೆಗೆ ಕುಳಿತುಕೊಳ್ಳುವ ಅಭ್ಯರ್ಥಿಗಳಿಂದ ಬಣ್ಣದ ಎರಡು ಭಾವಚಿತ್ರಗಳನ್ನು ಪರೀಕ್ಷಾ ಶುಲ್ಕ ಸಂಗ್ರಹಿಸುವಾಗಲೇ ಕಡ್ಡಾಯವಾಗಿ ಪಡೆದುಕೊಳ್ಳಬೇಕು. ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಮತ್ತು ಫೋಟೋ ನೀಡಿದ ನಂತರವೇ ಅವರ ವಿವರಗಳನ್ನು ನಾಮಿನಲ್ ರೋಲ್‌ನಲ್ಲಿ ಭರ್ತಿ ಮಾಡುವುದು.
3. ಓ.ಎಂ.ಆರ್.ಗಳಲ್ಲಿ ಭಾವಚಿತ್ರ ಅಂಟಿಸದೇ ಕಳುಹಿಸುವ ಓ.ಎಂ.ಆರ್‌ಗಳನ್ನು ಸ್ಕ್ಯಾನಿಂಗ್ ಮಾಡುವ ಹಂತದಲ್ಲೇ ತಿರಸ್ಕರಿಸಲಾಗುವುದು. ಅವರಿಗೆ ಯಾವುದೇ ಕಾರಣಕ್ಕೂ ಪ್ರವೇಶಪತ್ರ ನೀಡಲಾಗುವುದಿಲ್ಲ. ಇದಕ್ಕೆ ಸಂಬಂಧಿಸಿದ ಪರೀಕ್ಷಾ ಕೇಂದ್ರದ ಮುಖ್ಯಅಧೀಕ್ಷಕರು, ಚಿತ್ರಕಲಾ ಶಿಕ್ಷಕರು ಮತ್ತು ಅಭ್ಯರ್ಥಿಗಳೇ ಜವಾಬ್ದಾರರು.
4. ಭರ್ತಿ ಮಾಡಿದ ಓ.ಎಂ.ಆರ್.ನ ಜೆರಾಕ್ಸ್ ಪ್ರತಿಯನ್ನು ಕೇಂದ್ರದಲ್ಲಿ ಇಟ್ಟುಕೊಳ್ಳುವುದು.
5. ಓ.ಎಂ.ಆರ್.ನಲ್ಲಿ ತಾಯಿಯ ಹೆಸರನ್ನು ತುಂಬಬೇಕಾಗಿರುವುದರಿಂದ ತಾಯಿಯ ಹೆಸರನ್ನು ಸಂಗ್ರಹಿಸಿಟ್ಟುಕೊಳ್ಳುವುದು.
6. ನಿಮ್ಮ ಬೇಡಿಕೆಗೆ ಅನುಗುಣವಾಗಿ ಓ.ಎಂ.ಆರ್ ಶೀಟುಗಳನ್ನು ನೀಡಲಾಗುವುದು, ಯಾವುದೇ ಕಾರಣಕ್ಕೂ ಹೆಚ್ಚುವರಿಯಾಗಿ ಓ.ಎಂ.ಆರ್. ಶೀಟ್‌ಗಳನ್ನು ನೀಡಲಾಗುವುದಿಲ್ಲ.

(ಎಸ್.ಕೆ.ಚನ್ನಬಸಪ್ಪ)
ನಿರ್ದೇಶಕರು
(ಇತರೆ ಪರೀಕ್ಷೆಗಳು)

ಪ್ರತಿಯನ್ನು:-

1. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಹೊಸಕೆರೆಹಳ್ಳಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಜಿಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ, ಸೂಕ್ತ ಕ್ರಮಕ್ಕಾಗಿ.'
4. ರಾಜ್ಯದ ಎಲ್ಲಾ ತಾಲ್ಲೂಕ್ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ, ಸೂಕ್ತ ಕ್ರಮಕ್ಕಾಗಿ.
5. ಕೇಂದ್ರಗಳ ಎಲ್ಲಾ ಮುಖ್ಯ ಅಧೀಕ್ಷಕರಿಗೆ, ಸೂಕ್ತ ಕ್ರಮಕ್ಕಾಗಿ.
6. ಹಿರಿಯ ಸಹಾಯಕ ನಿರ್ದೇಶಕರು (ಡ್ರಾಯಿಂಗ್ ಗ್ರೇಡ್ ಪರೀಕ್ಷೆ) ಆಯುಕ್ತರ ಕಛೇರಿ, ಬೆಂಗಳೂರು, ವಿಭಾಗೀಯ ಆಯುಕ್ತರ ಕಛೇರಿ, ಧಾರವಾಡ, ಕಲಬುರಗಿ ರವರಿಗೆ ಸೂಕ್ತ ಕ್ರಮಕ್ಕಾಗಿ.
7. ವಿಭಾಗೀಯ ಹಿರಿಯ ಚಿತ್ರಕಲಾ ವಿಷಯ ಪರಿವೀಕ್ಷಕರು ಬೆಂಗಳೂರು, ಮೈಸೂರು, ಬೆಳಗಾಂ ಮತ್ತು ಕಲಬುರಗಿ ರವರಿಗೆ ಕಳುಹಿಸುತ್ತಾ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.
8. ಕಛೇರಿ ಪ್ರತಿ.